1. ಬಿಜಾಪುರ ಮತಕ್ಷೇತ್ರ: ಇಮಾಮತ್ ಕಮಿಟಿ ಜಾಮಿಯಾ ಮಸೀದಿ ಬಿಜಾಪುರ ಟೌನ್, ಬಿಜಾಪುರ ರೂ. 5.00 ಲಕ್ಷ.
2. ತಿಕೋಟಾ ಮತಕ್ಷೇತ್ರ: ಹಾಜಿ ಮಸ್ತಾನ ಅಲ್ಪಸಂಖ್ಯಾತರ ಸೇವಾ ಸಂಘ ತಿಕೋಟಾ, ಬಿಜಾಪುರ ತಾಲ್ಲೂಕು ರೂ. 2.00 ಲಕ್ಷ.

ಬಿಜಾಪುರ ಜಿಲ್ಲೆಯಲ್ಲಿನ ಸಣ್ಣ ಕೈಗಾರಿಕೆ ಘಟಕಗಳಿಗೆ ಸಬ್ಸಿಡಿ ಬಾಕಿ ಪಾವತಿ ಬಗ್ಗೆ

4192 (4795) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮೇಗೌಡ (ತ್ರಿಕೋಟ) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಹಜ್ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕಾ ಘಟಕಗಳಿಗೆ ಬರಬೇಕಾದ ಸಬ್ಸಿಡಿ ಬಾಕಿ ಹಣ ಎಷ್ಟು? ಎಷ್ಟು ವರ್ಷಗಳಿಂದ ಸಬ್ಸಿಡಿ ಹಣ ಬಾಕಿ ಇದೆ?

ಆ) ಜಿಲ್ಲೆಯಲ್ಲಿ ಯಾವ ಯಾವ ಸಣ್ಣ ಕೈಗಾರಿಕಾ ಘಟಕಗಳಿಗೆ ಎಷ್ಟೆಷ್ಟು ಸಬ್ಸಿಡಿ ಹಣ ಬಾಕಿ ಬರಬೇಕಾಗಿದೆ? ವಿವರ ಒದಗಿಸುವುದು?

ಇ) ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಬರಗಾಲವಿದ್ದರೂ ದ್ರಾಕ್ಷಿ ಬೆಳೆಗಾರರ ಒಣದ್ರಾಕ್ಷಿ ಘಟಕಗಳಿಗೆ ನೀಡಬೇಕಾದ ಸಬ್ಸಿಡಿ ಬಾಕಿ ಹಣ ನೀಡಲು ಸರ್ಕಾರ ಏನಾದರೂ ಕ್ರಮ ಕೈಗೊಳ್ಳಲಾಗುವುದೇ?

ಈ) ಹಾಗಿದ್ದರೆ, ಈ ಬಗ್ಗೆ ನಿರ್ದಿಷ್ಟವಾದ ಕಾಲಮಿತಿ ಏನು? ವಿವರ ಒದಗಿಸುವುದು.

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕಾ ಮತ್ತು ಹಜ್ ಸಚಿವರು)

ಅ) ಬಿಜಾಪುರ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕಾ ಘಟಕಗಳಿಗೆ ಜೂನ್ 2003ರ ಅಂತ್ಯದವರೆಗೆ 538 ಘಟಕಗಳಿಗೆ ರೂ. 8,17,82,708-00ಗಳ ಸಬ್ಸಿಡಿ ಬಾಕಿ ಇದೆ. ಇದು 01.01.99 ರಿಂದ ಬಾಕಿ ಇದೆ.

ಆ) ಬಿಜಾಪುರ ಜಿಲ್ಲೆಯಲ್ಲಿ 538 ವಿವಿಧ ತರಹದ ಸಣ್ಣ ಕೈಗಾರಿಕಾ ಘಟಕಗಳಿದೆ ರೂ. 8,17,82,708ಗಳ ಸಬ್ಸಿಡಿ ಹಣ ಬಾಕಿ ಇದೆ.

ಇ) ಆಯವ್ಯಯದಲ್ಲಿ ಒದಗಿಸಲಾದ ಮೊತ್ತದಲ್ಲಿ ಬಿಜಾಪುರ ಜಿಲ್ಲೆಗೂ ಸೇರಿದಂತೆ ಸಬ್ಸಿಡಿ ಬಿಡುಗಡೆ ಮಾಡಲು ಪ್ರಯತ್ನ ಮಾಡಲಾಗುತ್ತಿದೆ.

ಈ) ರಾಜ್ಯದಲ್ಲಿ ಒಟ್ಟಾರೆ ಬಿಡುಗಡೆಗಾಗಿ ಬಾಕಿ ಇರುವ ರೂ. 405.00 ಕೋಟಿಗಳಲ್ಲಿ ಪ್ರಸಕ್ತ ಸಾಲಿನ ವರ್ಷದ ಆಯವ್ಯಯದಲ್ಲಿ ರೂ. 12.56 ಕೋಟಿಗಳನ್ನು ಒದಗಿಸಲಾಗಿದೆ. ಹೆಚ್ಚುವರಿ ಸಂಪನ್ಮೂಲವನ್ನು ಕ್ರೋಢೀಕರಿಸಿ ಬಾಕಿ ಸಬ್ಸಿಡಿ ಮೊತ್ತವನ್ನು ಬಾಂಡ್‌ಗಳ ಮೂಲಕ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಗುಲ್ಬರ್ಗಾ ವಿಧಾನಸಭಾ ಕ್ಷೇತ್ರದ ಕೊಳವೆ ಬಾವಿಗಳ ಫಲಾನುಭವಿಗಳು

4193 (4587) : ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪೂರ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಕಲ್ಯಾಣ ನಿಗಮವು ಕಳೆದ 3 ವರ್ಷಗಳಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ಕೊರೆದ ವಿಧಾನಸಭಾ ಕ್ಷೇತ್ರವಾರು ಕೊಳವೆಬಾವಿಗಳ ಫಲಾನುಭವಿಗಳ ವಿವರ ಒದಗಿಸುವುದು.

ಆ) ಈ ರೀತಿ ಯೋಜನೆಯಡಿ ಎಷ್ಟು ಫಲಾನುಭವಿಗಳನ್ನು ಗುರುತಿಸಿ ಕೊಳವೆಬಾವಿಗಳನ್ನು ಕೊರೆಸಲಾಗಿದೆ. ಕೊರೆಯಲು ಬಾಕಿ ಇರುವ ಫಲಾನುಭವಿಗಳ ಸಂಖ್ಯೆ ಎಷ್ಟು;